ಸಾಕ್ಷಿಯನ್ನು ದಿಃ 10-02-2025 ರಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಶ್ರಿ.ಜೆ.ಡಿ.ಡಿ. ವಕೀಲರಿಂದ

ನನ್ನ ತಂದೆ ಮತ್ತು ನನ್ನ ತಂದೆಯ ತಂಗಿಯ ನಡುವೆ ಯಾವುದೇ ರೀತಿಯ ನೊಂದಾಯಿತ ಕ್ರಯ ಪತ್ರ ಇದೆಯಾ ಎಂದರೆ ಸಾಕ್ಷಿಯು ನನ್ನ ತಂದೆಯ ಸಹೋದರಿಯರು ನನ್ನ ತಂದೆ ಪರವಾಗಿ ಹಕ್ಕುನ್ನು ಬಿಟ್ಟು ಕೊಟ್ಟಿದ್ದು ನೊಂದಾಯಿತ ಕಚೇರಿಯಲ್ಲಿ ಸಹಿ ಹಾಕಿರುತ್ತಾರೆ ಎನ್ನುತ್ತಾರೆ. ನನ್ನ ತಂದೆ ಮತ್ತು ಅವರ ಸಹೋದರಿಯರ ನಡುವೆ ವಾಟ್ನಿ ಪತ್ರಗಳು ಆಗಿರುವುದಿಲ್ಲ . ದಾವಾ ಆಸ್ತಿಗಳಲ್ಲಿ ನನ್ನ ತಂದೆಯ ಸಹೋದರಿಯರಿಗೂ ಸಮಾನ ಹಕ್ಕು ಮತ್ತು ಭಾಗ ಇರುತ್ತದೆ ಎಂದರೆ ಸಾಕ್ಷಿಯು ಇದೆ ಆದರೆ ಹಕ್ಕು ಬಿಟ್ಟುಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ನನ್ನ ತಂದೆ ಸಹೋದರಿಯರ ಹಕ್ಕುನ್ನು ಬಿಟ್ಟುಕೊಟ್ಟಿರುತ್ತಾರೆಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

2. ನನ್ನ ತಂದೆಯ ಸಹೋದರಿಯರಿಗೆ ಆಸ್ತಿಯಲ್ಲಿ ಹಕ್ಕು ಇದ್ದ ಕಾರಣ ಅವರು ಸಹ ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಬೇಕು ಎಂದರೆ ಸಾಕ್ಷಿಯು ಹಕ್ಕು ಬಿಟ್ಟುಕೊಟ್ಟ ಕಾರಣ ಬರುವುದಿಲ್ಲ ಎಂದು ನುಡಿಯುತ್ತಾರೆ. ನನ್ನ ತಾತನ ಮತ್ತು ಅವರ ಸಹೋದರರ ನಡುವೆ ಆಸ್ತಿ ಹಂಚಿಕೆ ಆದ ಬಗ್ಗೆ ವಾಟ್ನಿ ಪತ್ರಗಳು ಇರುವುದಿಲ್ಲ

3. ಅಸಲುದಾವಾ ನಂ.7/2023 ನ್ನು ನನ್ನ ತಾತನ ಸಹೋದರಿಯರು ನಮ್ಮ ವಿರುದ್ದ ಆಸ್ತಿ ಹಂಚಿಕೆಗಾಗಿ ಈ ನ್ಯಾಯಾಲಯದಲ್ಲಿ ದಾವಾ ಸಲ್ಲಿಸಿದ್ದರು ಎಂದರೆ ಸರಿ. ಆದ್ದರಿಂದ ನಾವು ಈ ದಾವೆಗೆ ಸಂಪೂರ್ಣ ಮಾಲಕರು ಅಲ್ಲ ಎಂದರೆ ಸರಿಯಲ್ಲ. ನನ್ನ ತಾತ ಖಾಯಂ ಆಗಿ ಹೂವಿನಹಡಗಲಿಯ ಮಾಗಡದಲ್ಲಿ ವಾಸವಿರುತ್ತಾರೆ ಎಂದರೆ ಸರಿ. ನನ್ನ ತಂದೆ

ರಣತೂರ ಗ್ರಾಮದಲ್ಲಿ ಜನಿಸಿರುತ್ತಾರೆ. ಅದಕ್ಕೆ ಸಂಬಂಧಪಟ್ಟ ದಾಖಲೆಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿರುವುದಿಲ್ಲ.

4. 1958 ರಲ್ಲಿ ದಾವಾ ಆಸ್ತಿಯು ನಮ್ಮ ಮೂಲ ಪುರಷ ಹನುಮಂತಪ್ಪನಿಗೆ ದೇವಸ್ಥಾನದ ಪೂಜೆ ಮಾಡುವುದಕ್ಕಾಗಿ ನೀಡಿರುತ್ತಾರೆ. 1983 ರಲ್ಲಿ ನಮ್ಮ ಮೂಲಪುರಷ ಹನುಮಂತಪ್ಪನಿಗೆ Tenancy ಮೂಲಕ ಆಸ್ತಿ ಬಂದಿರುತ್ತದೆ ಎಂದರೆ ಸರಿ. ದಾವಾ ಆಸ್ತಿಯಲ್ಲಿ ಆಶ್ರಯ ಮನೆಗಳು ಸುಮಾರು 8 ರಿಂದ 10 ವರ್ಷಗಳಿಂದ ಇರುತ್ತವೆ. ಸಾಕ್ಷಿಯು ಮುಂದುವರೆದು ನನ್ನ 2018 ರಲ್ಲಿ ನನ್ನ ಗಮನಕ್ಕೆ ಬಂದಿರುತ್ತವೆ ಎನ್ನುತ್ತಾರೆ. 1984 ರಲ್ಲಿ ಸರ್ಕಾರದವರು ದಾವಾ ಆಸ್ತಿಯಲ್ಲಿ ಆಶ್ರಯ ಯೋಜನೆಯಡಿಯಲ್ಲಿ ಮನೆಗಳನ್ನು ಪ್ರತಿವಾದಿಗಳಿಗೆ ನೀಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಯೋಜನೆಯಡಿ ನೀಡಿದ ಮನೆ ಬಗ್ಗೆ ನಮ್ಮ ಮೂಲ ಪುರಷ ಹನುಮಪ್ಪ ತಕರಾರು ಮಾಡಿದ ಬಗ್ಗೆ ದಾಖಲೆಗಳು ಲಭ್ಯ ಇರುವುದಿಲ್ಲ. ನನ್ನ ತಾತ ಲಕ್ಷ್ಮಣ ಆಗಲೀ ಅವರ ಸಹೋದರರಾಗಲೀ ಅಕ್ರಮವಾಗಿ ಮನೆ ಕಟ್ಟಿದ್ದಾರೆ ಎಂದು ಪ್ರಶ್ನಿಸಿದ ದಾಖಲೆಗಳು ಇರುವುದಿಲ್ಲ. ಆಶ್ರಯ ಯೋಜನೆಯಡಿಯಲ್ಲಿ ದಾವಾ ಜಮೀನುಗಳಲ್ಲಿ ಕಟ್ಟಿದ್ಧ ಮನೆಗಳು ಕಾನೂನುಬದ್ಧವಾಗಿರುವುದರಿಂದ ನನ್ನ ಪೂರ್ವಜರು ಪ್ರಶ್ನೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ಪೂರ್ವಜರಾಗಲೀ, ನಾವಾಗಲೀ ದಾವಾ ಆಸ್ತಿಯ ಸ್ವಾಧೀನದ ಅನುಭವದಲ್ಲಿ ಎಂದಿಗೂ ಇರಲಿಲ್ಲ ಎಂದರೆ ಸರಿಯಲ್ಲ.

5. 1984 ರಿಂದ ಸರ್ಕಾರದವರು ಆಶ್ರಯಯೋಜಯಡಿಯಲ್ಲಿ ಪ್ರತಿವಾದಿಗಳಿಗೆ ಹಕ್ಕು ಪತ್ರಗಳನ್ನು ಮತ್ತು ಪಟ್ಟಾಪುಸ್ತಕಗಳನ್ನುನಿಡೀದ್ದು ಅದರ ಪ್ರಕಾರ ಅವರು ಅದರ ಸ್ವಾಧೀನ ಅನುಭವದಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ. ಸದರಿ ವಿಚಾರ ನಮ್ಮೆಲ್ಲರಿಗೂ ಗೊತ್ತಿದ್ದರೂ ಇಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳು 1984 ರಿಂದ ಅಡೆತಡೆ ಇಲ್ಲದೇ ಸ್ವಾಧೀನ ಅನುಭವದಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ.

6. ಸರ್ಕಾರದವರು ಕಾನೂನು ಬದ್ಧವಾಗಿ ಕ್ರಮಗಳನ್ನು ತೆಗೆದುಕೊಂಡು ಪ್ರತಿವಾದಿಗಳಿಗೆ ಆಶ್ರಯ ಯೋಜನೆಯಡಿಯಲ್ಲಿ ಮನೆ ಮಂಜೂರು ಮಾಡಿರುತ್ತಾರೆ ಎಂದರೆ ಸರಿಯಲ್ಲ. 1984 ರ ಪೂರ್ವದಲ್ಲಿ ಗ್ರಾಮ ಪಂಚಾಯತಿ ಅಸ್ಥಿತ್ವದಲ್ಲಿ ಇರಲಿಲ್ಲ ಎಂದರೆ ಸರಿ. ಅದಕ್ಕೂ ಮೊದಲು ಮಂಡಳ ಪಂಚಾಯತಿ ಅಂತಾ ಇತ್ತು ಎಂದರೆ ಸರಿ. ನಮ್ಮ ರಣತೂರ ಗ್ರಾಮ ಬೆಳ್ಳಟ್ಟಿ ಮಂಡಳ ಪಂಚಾಯತಿಯಡಿಯಲ್ಲಿ ಬರುತ್ತಿತ್ತು ಎಂದರೆ ಸರಿ. ಪ್ರತಿವಾದಿಗಳ ಆಶ್ರಯ ಯೋಜನೆಯ ಸದರಿ ಮಂಡಳ ಪಂಚಾಯತಿಯಲ್ಲಿ ದಾಖಲಾಗಿರುತ್ತವೆ ಎಂದರೆ ಸರಿಯಲ್ಲ.

7. ನಮ್ಮ ಜಮೀನುಗಳನ್ನು ಅತಿಕ್ರಮಣ ಮಾಡಿಕೊಂಡ ವ್ಯಕ್ತಿಗಳ ಪೂರ್ಣ ಹೆಸರು ವಿಳಾಸ ನನಗೆ ಹೇಳಲು ಆಗುವುದಿಲ್ಲ. ಪ್ರತಿವಾದಿಗಳನ್ನು ಹೊರತುಪಡಿಸಿ ಇನ್ನೂ ಹಲವು ಜನರಿಗೆ ಮನೆಗಳು ಮಂಜೂರಾಗಿರುತ್ತವೆ ಎಂದರೆ ಸರಿ. ಅವರು ಕೂಡ ಈ ದಾವೆಯಲ್ಲಿ ಅವಶ್ಯಕ ಪಕ್ಷಗಾರರಾಗಿರುತ್ತಾರೆ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ನುಡಿಯುತ್ತಾರೆ. ದಾವಾ ಆಸ್ತಿಯಲ್ಲಿ ನಿವೇಶನ 30 ರಲ್ಲಿ ಸಮಾಜ ಮಂದಿರ ಎಂದು ಸರ್ಕಾರದ ವತಿಯಿಂದ ನಿರ್ಮಾಣವಾಗಿರುತ್ತದೆ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ದೇವಸ್ಥಾನದ ಕಮೀಟಿಯ ದಾವಾ ಆಸ್ತಿಯಲ್ಲಿ ಅವಶ್ಯಕ ಪಕ್ಷಗಾರರಿರುತ್ತಾರೆ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ನುಡಿಯುತ್ತಾರೆ. ದಾವಾ ಆಸ್ತಿಗಳು ಒಟ್ಟು 15 ಮನೆಗಳು ಇರುತ್ತವೆ. ಸದರಿ 15 ನಿವೇಶನಗಳ ಕಿಮ್ಮತ್ತು 5 ರಿಂದ 8 ಲಕ್ಷ ಇರುತ್ತದೆ ಎಂದರೆ ಸಾಕ್ಷಿ ಗೊತ್ತಿಲ್ಲ ಎನ್ನುತ್ತಾರೆ. ಅಲ್ಲಿ ಆರಸಿಸಿ ಮತ್ತು ಹಂಚಿನ ಮನೆ ಇರುತ್ತವೆ ಎಂದರೆ ಸರಿ. ಅದ್ದರಿಂದ ದಾವಾ ಆಸ್ತಿಗಳ ಒಟ್ಟು ಕಿಮ್ಮತ್ತು 85 ಲಕ್ಷಕ್ಕಿಂತ ಹೆಚ್ಚು ಇರುತ್ತವೆ ಎಂದರೆ ಸಾಕ್ಷಿ ಗೊತ್ತಿಲ್ಲ ಎನ್ನುತ್ತಾರೆ.

8. ಸರ್ವೆ ನಂ.129 ಒಟ್ಟು 15 ಎಕರೆ 12 ಗುಂಟೆ ಇರುತ್ತದೆ. ನಮ್ಮ ಮೂಲ ಪುರಷ ಹನುಮಂತಪ್ಪ ಸದರಿ ಜಮೀನನನ್ನು ಇಲಾಖೆ ವತಿಯಿಂದ ಅಳತೆ ಮಾಡಿಸಿ ಅದರಲ್ಲಿ ಒತ್ತುವಾರಿ ಆಗಿರುತ್ತದೆ ಎಂದು ತಕರಾರು ಮಾಡಿ ಸಲ್ಲಿಸಿದ ದಾಖಲೆಗಳು ಇರುವುದಿಲ್ಲ. ಅದೇ

ರೀತಿ ಅವರ ಮಕ್ಕಳು ಸಹ ಅಳತೆ ಮಾಡಿಸಿ ಒತ್ತುವರಿ ಮಾಡಿದ ಬಗ್ಗೆ ಯಾವುದೇ ದಾಖಲೆ ಇರುವುದಿಲ್ಲ. ನಮ್ಮ ಪೂರ್ವಜರು ದಾವಾ ಜಮೀನಿನಲ್ಲಿ ಯಾವುದೇ ರೀತಿಯ ಅತಿಕ್ರಮಣ ಆಗಿರುವುದಿಲ್ಲ ಆದ ಕಾರಣ ತಕರಾರು ಮಾಡಿರುವುದಿಲ್ಲ.

(ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ ಕಾರಣ ಪಾಟೀ ಸವಾಲು ಮುಂದೂಡಲಾಯಿತು.)

**(**ನನ್ನ ಉಕ್ತ ಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**)**

ಓದಿ ಹೇ ಕೇ ಸರಿ ಅದೆ.

Sd/-10-02-2025
ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಪ್ರ.ದ.ನ್ಯಾದಂ. ಲಕ್ಷ್ಮೇಶ್ವರ

ಸಾಕ್ಷಿದಾರರ ಸಹಿಃ